**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 10 ಸಿಡಬ್ಲು : 23

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಬಸಪ್ಪ ಅಂಗಡಿ |
| ತಂದೆಯ ಹೆಸರು | : ಶ್ರೀ. ಸಣ್ಣಮಲ್ಲಪ್ಪ ಅಂಗಡಿ |
| ವಯಸ್ಸು | : 63 ವರ್ಷ |
| ಉದ್ಯೋಗ | : ನಿವೃತ್ತ ಡಿ.ಸಿ.ಪಿ |
| ವಾಸ್ತವ್ಯ | : ಬೆಂಗಳೂರು |
| ದಿನಾಂಕ | : 11-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

(**ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಬೆಂಗಳೂರಿನ ತಮ್ಮ ಮನೆಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಮಗಳು ಸಾಕ್ಷಿ ರವರು ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಸ್.ಪಾಟೀಲ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 25-06-2015 ರಿಂದ 18-01-2018 ರ ವರೆಗೆ ನಾನು ಚಿಕ್ಕೋಡಿ ಉಪವಿಭಾಗದಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಕುಡಚಿ ಪೋಲಿಸ ಠಾಣೆ ನನ್ನ ಕಾರ್ಯವ್ಯಾಪ್ತಿಗೆ ಬರುತ್ತಿತ್ತು.

2. ದಿನಾಂಕಃ 05-10-2015 ರಂದು ಬೆಳಗಾವಿ ಜಿಲ್ಲಾ ಎಸ್.ಪಿ ಅವರ ಆದೇಶದ ಮೇರೆಗೆ ಚಾಸಾಃ 22 ಆಂಜನೇಯ ಪಿ.ಎಸ್.ಐ ರವರಿಂದ ಕುಡಚಿ ಪೋಲಿಸ ಠಾಣೆ

ಅಪರಾಧ ಸಂಖ್ಯೆ 252/2015 ರ ಪ್ರಕರಣದ ತನಿಖೆಯನ್ನು ವಹಿಸಿಕೊಂಡಿದ್ದೇನೆ. ತನಿಖಾ ಆದೇಶವನ್ನು ಸಾಕ್ಷಿ ಗುರುತಿಸಿದ್ದಾರೆ. ಅದನ್ನು ನಿಪಿ–11 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ–11 [ಎ] ಎಂದು ಗುರುತಿಸಲಾಯಿತು.

3. ಅದೇ ದಿನ ಅಂದರೆ ದಿನಾಂಕ 05–10–2015 ರಂದು ಘಟನಾ ಸ್ಥಳವಾದ ಮೊರಬ ಗ್ರಾಮದಲ್ಲಿರುವ ಟೇಲರಿಂಗ್ ಅಂಗಡಿ ಮತ್ತು ಪಾನಶಾಕಪ್‌ಗೆ ಭೇಟಿ ನೀಡಿದ್ದೇನು. ಅಲ್ಲಿ ಚಾಸಾಃ2 ಚಂದ್ರಕಾಂತ ಬಡಿಗೇರ ಮತ್ತು ಚಾಸಾಃ 3 ಮಹಾದೇವ ಅಸೋದೆ ಅವರುಗಳನ್ನು ಕರೆಸಿಕೊಂಡು, ಅವರುಗಳ ಸಮಕ್ಷಮ ಚಾಸಾಃ 1 ಪ್ರಭಾಕರ ಅಸೋದೆ ಅವರು ತೋರಿಸಿದ ಸ್ಥಳದಲ್ಲಿ ನಿಪಿ–7 ಪಂಚನಾಮೆಯನ್ನು ಮಾಡಿದ್ದೇನೆ. ಪಂಚನಾಮಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–7 [ಬಿ ] ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿ ಪೋಟೋವನ್ನು ತೆಗೆದಿದ್ದೇನೆ. ಕಚ್ಚಾ ನಕ್ಷೆಯನ್ನು ನಿಪಿ–12 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–12 [ಎ] ಎಂದು ಗುರುತಿಸಲಾಯಿತು. ಸಾಕ್ಷಿ ಎರಡು ಪೋಟೋಗಳನ್ನು ನೋಡಿ ಮೊದಲನೇ ಪೋಟೋ ಟೇಲರಿಂಗ ಅಂಗಡಿಯದು ಎಂದು, ಎರಡನೇ ಪೋಟೋ ಪಾನಶಾಪ್‌ನದು ಎಂದು ಗುರುತಿಸಿದ್ದಾರೆ. ಪೋಟೋ ವಿಧ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಪ್ರಮಾಣ ಪತ್ರಗಳು ಲಭ್ಯ ಇಲ್ಲದೇ ಇರುವುದರಿಂದ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

4. ಅದೇ ದಿನ ಅಂದರೆ ದಿನಾಂಕ 05–10–2015 ರಂದು ಚಾಸಾಃ 1 ಪ್ರಾಸಾಃ 3 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಅದರಲ್ಲಿ ಆರೋಪಿತರು ಟವಲ್‌ನ್ನು ನನ್ನ ಕತ್ತಿಗೆಗೆ ಹಾಕಿ ಬಿಗಿದರು ಎಂದು ನಾನು ದೂರಿನಲ್ಲಿ ಹೇಳಿದ್ದು ಅದು ಸರಿಯಲ್ಲ ಎಂದು ಮುಂದುವರೆದ ಹೇಳಿಕೆಯಲ್ಲಿ ಹೇಳಿದ್ದಾರೆ.

5. ದಿನಾಂಕಃ06–10–2015 ರಂದು ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿಕೊಂಡುವಂತೆ ಚಾಸಾಃ 11 ಪ್ರಾಸಾಃ 1 ರವರಿಗೆ ಹಾಗೂ ಪಿರ್ಯಾದುದಾರರ

ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಚಾಸಾಃ 10 ರವರಿಗೆ ಮನವಿಯನ್ನು ಮಾಡಿದ್ದೇನೆ. ಚಾಸಾಃ 13 ಪ್ರಾಸಾಃ 2 ರವರಿಗೆ ಟೇಲರಿಂಗ್ ಅಂಗಡಿ ಮತ್ತು ಪಾನಶಾಪ್‌ನ ದಾಖಲೆಗಳನ್ನು ನೀಡುವಂತೆ ಮನವಿಯನ್ನು ಮಾಡಿದ್ದೇನೆ.

6. ಚಾಸಾಃ 10 ತಹಶೀಲ್ದಾರ ಅವರಿಗೆ ನೀಡಿದ ಮನವಿಯನ್ನು ನಿಪಿ-13 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-13 [ಎ] ಎಂದು ಗುರುತಿಸಲಾಯಿತು. ಚಾಸಾಃ 10 ರವರು ನೀಡಿದ ದೂರುದಾರರ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರವನ್ನು ದಿನಾಂಕಃ 21-10-2015 ರಂದು ಸ್ವೀಕರಿಸಿಕೊಂಡಿದ್ದೇನೆ. ಅದನ್ನು ನಿಪಿ-14 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-14 [ಎ] ಎಂದು ಗುರುತಿಸಲಾಯಿತು. ಅದರಂತೆ ಚಾಸಾಃ 1, ಚಾಸಾಃ 4 ಮತ್ತು ಚಾಸಾಃ 5 ರವರು ಪರಿಶಿಷ್ಟ ಜಾತಿಯ ಹಿಂದೂ ಹೊಲೆಯರ ಜಾತಿಗೆ ಸೇರಿದ್ದಾರೆ ಎಂದು, ಚಾಸಾಃ 6,ಚಾಸಾಃ 7 ಮತ್ತು ಆರೋಪಿತರು ಹಿಂದೂ ಲಿಂಗಾಯತ ಜಾತಿಗೆ ಸೇರಿರುತ್ತಾರೆ ಎಂದು ನಮೂದು ಇರುತ್ತದೆ.

7. ದಿನಾಂಕಃ 29-10-2015 ರಂದು ಚಾಸಾಃ 11 ಪ್ರಾಸಾಃ 1 ರವರಿಂದ ಘಟನಾ ಸ್ಥಳದ ನಕ್ಷೆಯನ್ನು ಪಡೆದುಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರ ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಬಿ] ಎಂದು ಗುರುತಿಸಲಾಯಿತು.

8. ದಿನಾಂಕಃ 05-10-2015 ರಿಂದ ದಿನಾಂಕಃ 26-11-2015 ರವರೆಗೆ ನಾನು ಆರೋಪಿತರನ್ನು ಪತ್ತೆ ಮಾಡಲು ಚಾಸಾಃ 15 ರಿಂದ ಚಾಸಾಃ 17 ರವನ್ನು ನೇಮಿಸಿದ್ದು, ಅವರುಗಳು ಪ್ರಯತ್ನ ಪಟ್ಟಾಗಿಯೂ ಸಹ ಆರೋಪಿತರು ಪತ್ತೆ ಆಗಿಲ್ಲ ಎಂದು ವರದಿ ನೀಡಿರುತ್ತಾರೆ.

9. ದಿನಾಂಕಃ 14-11-2015 ರಂದು ಚಾಸಾಃ 1, ಚಾಸಾಃ 4 ಮತ್ತು ಚಾಸಾಃ 5 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-8, ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-8 [ಬಿ], ನಿಪಿ-9 [ಬಿ] ಮತ್ತು ನಿಪಿ-10 [ಬಿ] ಎಂದು ಗುರುತಿಸಲಾಯಿತು.

10. ದಿನಾಂಕಃ 14-11-2015 ರಂದು ಚಾಸಾಃ 13 ರವರಿಂದ ಟೇಲರಿಂಗ ಮತ್ತು ಪಾನಶಾಪ್‌ಗೆ ಸಂಬಂಧಿಸಿದಂತಹ ದಾಖಲೆಗಳನ್ನು ಪಡೆದುಕೊಂಡಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿದೆ. ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-3 [ಬಿ ] ಮತ್ತು ನಿಪಿ-4 [ಬಿ] ಎಂದು ಗುರುತಿಸಲಾಯಿತು.

11. ದಿನಾಂಕಃ 29-11-2015 ರಂದು 1 ಮತ್ತು 2ನೇ ಆರೋಪಿತರನ್ನು ಚಾಸಾಃ 16, ಚಾಸಾಃ 18, ಚಾಸಾಃ 19, ಚಾಸಾಃ 20 ಮತ್ತು ಚಾಸಾಃ 21 ರವರು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ವರದಿಯೊಂದಿಗೆ ಹಾಜರುಮಾಡಿರುತ್ತಾರೆ. 1 ಮತ್ತು 2ನೇ ಆರೋಪಿತರನ್ನು ನಾನು ವಿಚಾರಿಸಿ, ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿ, ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ವರದಿಯನ್ನು ಸಾಕ್ಷಿ ಗುರುತಿಸಿದ್ದು ವರದಿಯನ್ನು ನಿಪಿ-15 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-15 [ಎ] ಎಂದು ಗುರುತಿಸಲಾಯಿತು.

12. ನಾನು ದಸ್ತಗಿರಿ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1ನೇ ಆರೋಪಿ ಗೈರು ಹಾಜರಾಗಿದ್ದು, 1ನೇ ಆರೋಪಿ ಪರ ವಕೀಲರು 1ನೇ ಆರೋಪಿಯ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಅರ್ಜಿ ಸಲ್ಲಿಸಿದ್ದು, 1ನೇ ಆರೋಪಿಯ ಗೈರು ಹಾಜರಾತಿಯನ್ನು ಮನ್ನಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯನ್ನು ಪುರಸ್ಕರಿಸಲಾಯಿತು.

13. 3 ರಿಂದ 11ನೇ ಆರೋಪಿತರು ತಲೆ ಮರೆಸಿಕೊಂಡಿರುತ್ತಾರೆ. ನಾನು ತನಿಖೆಯನ್ನು ಪೂರ್ಣಗೊಳಿಸಿ ಎಲ್ಲಾ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡುಬಂದಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ ಶ್ರೀ.ಆರ್.ಸಿ.ಪಿ ವಕೀಲರಿಂದ, 4, 8, 10 ಮತ್ತು 11 ನೇ ಆರೋಪಿತರ ಪರ ಶ್ರೀ.ಯು.ಬಿ.ಜೆ ವಕೀಲರಿಂದ, 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ವಕೀಲರಿಂದಃ**

ಎಲ್ಲಾ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲು ಮಾಡಲು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.